# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-1/ಡಿಇ/19/2018/ಎ.ಆರ್.ಇ-10

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 06/01/2022.

## ವಿಚಾರಣಾ ವರದಿ

**ಉಪಸ್ಥಿತರು:** ಜಿ. ನಂಜುಂಡಯ್ಯ,
ಅಪರ ನಿಬಂಧಕರು ವಿಚಾರಣೆಗಳು-10,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

**ವಿಷಯ:** ಆಪಾದಿತ ಸರ್ಕಾರಿ ನೌಕರ ಶ್ರೀ ಎಂ. ಎನ್. ಗೋತೆ, ಹಿಂದಿನ ತಹಶೀಲ್ದಾರ್, ಜೇವರ್ಗಿ ತಾಲ್ಲೂಕು, ಹಾಲಿ ನಿವೃತ್ತ ರವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:** 1. ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ-1525/2013/ಡಿಆರ್‌ಇ-3 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 08/08/2016.

2. ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 132 ಎಡಿಇ 2016, ಬೆಂಗಳೂರು, ದಿನಾಂಕ: 04/12/2017.

3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-1/ಡಿಇ/19/2018, ಬೆಂಗಳೂರು ದಿನಾಂಕ: 11/01/2018.

* * * *

ಗೌರವಾನ್ವಿತ ಉಪಲೋಕಾಯುಕ್ತರವರು ಗುಲ್ಬರ್ಗಾ ಜಿಲ್ಲೆಯ ಅಫ್ಜಲ್‌ಪುರ ಹಾಗೂ ಜೇವರ್ಗಿ ತಾಲ್ಲೂಕುಗಳಲ್ಲಿ ಹರಿದು ಹೋಗುವ ಭೀಮಾ ನದಿಯ ತೀರದಲ್ಲಿ ಅಕ್ರಮ ಮರಳು ಸಾಗಾಣಿಕೆ ನಡೆಯುತ್ತಿದೆ ಎಂಬ ಪತ್ರಿಕಾ ಪ್ರಕಟಣೆಯನ್ನಾಧರಿಸಿ, ಅನಾಮಧೇಯರೊಬ್ಬರು ದೂರನ್ನು ಮಾನ್ಯ ಮುಖ್ಯ ಮಂತ್ರಿಗಳು, ಕರ್ನಾಟಕ ಸರ್ಕಾರ ಹಾಗೂ ಅದರ ಪ್ರತಿಯನ್ನು ಲೋಕಾಯುಕ್ತ ಸಂಸ್ಥೆಗೆ ಸಲ್ಲಿಸಿದ್ದು, ಸದರಿ ದೂರನ್ನು ಸ್ವಯಂ ಪ್ರೇರಿತ ತನಿಖೆಗೊಳಪಡಿಸಿ (1) ಶ್ರೀ ಎಂ.ಎನ್. ಗೋತೆ,

ತಹಶೀಲ್ದಾರ್, ಜೇವರ್ಗಿ ತಾಲ್ಲೂಕು, ಕಲ್ಬುರ್ಗಿ ಜಿಲ್ಲೆ (ಪ್ರಸ್ತುತ ನಿವೃತ್ತ) (2) ಶ್ರೀ ಜಿ.ಇ. ಶಿವಲಿಂಗಪ್ಪ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಮತ್ತು ಬಂದರು ಮತ್ತು ಒಳನಾಡ ಜಲಸಾರಿಗೆ ಇಲಾಖೆ, ಜೇವರ್ಗಿ ಉಯಪ ವಿಭಾಗ, ಕಲ್ಬುರ್ಗಿ ಜಿಲ್ಲೆ (ಪ್ರಸ್ತುತ ನಿವೃತ್ತ) ಮತ್ತು (3) ಶ್ರೀ ಸುದೀರ್ ಕುಮಾರ್ ಎಂ. ಬೆಂಕಿ, ಜೇವರ್ಗಿ ಪೊಲೀಸ್ ಠಾಣೆ, ಜೇವರ್ಗಿ, ಜೇವರ್ಗಿ ತಲ್ಲೂಕು, ಕಲ್ಬುರ್ಗಿ ಜಿಲ್ಲೆ, ಪ್ರಸ್ತುತ ಅಂತರಿಕ ಭದ್ರತಾ ವಿಭಾಗ, ಕಲ್ಬುರ್ಗಿ (ಇನ್ನು ಮುಂದೆ ಕ್ರಮವಾಗಿ 1 ರಿಂದ 3 ನೇ ಎದುರುದಾರರು ಎಂದು ಕರೆಯಲ್ಪಡುವರು) ಇವರುಗಳ ವಿರುದ್ಧ ಕ್ರಮಕ್ಕಾಗಿ ಆದೇಶಿಸಿರುತ್ತಾರೆ.

2. ಮೇಲ್ಕಂಡಂತೆ ನೀಡಲಾದ ದೂರಿನ ಅಂಶಗಳನ್ನು ಪರಿಗಣಿಸಿ, ಗೌರವಾನ್ವಿತ ಉಪಲೋಕಾಯುಕ್ತರವರು ದೂರನ್ನು ಪರಿಶೀಲಿಸಿ, ಸ್ಥಳಕ್ಕೆ ಭೇಟಿ ನೀಡಿ ವಿಚಾರನೆ ನಡೆಸಿ, ವರದಿ ಸಲ್ಲಿಸಲು ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಗುಲ್ಬರ್ಗಾರವರಿಗೆ ಸೂಚಿಸಿದ್ದು, ಅದರಂತೆ, ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಗುಲ್ಬರ್ಗಾರವರು ದಿನಾಂಕ 04.07.2013 ರ ತಮ್ಮ ತನಿಖಾ ವರದಿಯಲ್ಲಿ ನದಿ ದಂಡೆಯಲ್ಲಿ ನದಿ ಹಾಳಾಗುವ ಮಟ್ಟದಲ್ಲಿ ಮರಳನ್ನು ತೆಗೆಸಿ, ಸಂಗ್ರಹಿಸಿ ಅಕ್ರಮವಾಗಿ ಸಾಗಾಣಿಕೆ ಮಾಡಿರುವುದು ಕಂಡು ಬಂದಿದೆ, ನಂತರ 1 ರಿಂದ 3ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿದ್ದು, ಎದುರುದಾರರ ವಿರುದ್ಧ ಮಾಡಿರುವ ಆಪಾದನೆಗಳು ಮೇಲ್ನೋಟಕ್ಕೆ ಸಾಬೀತಾಗಿದ್ದರಿಂದ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಆದೇಶ ದಿನಾಂಕ: 04/12/2017 ರಂದು, **ಆಪಾದಿತ ಸರ್ಕಾರಿ ನೌಕರ ಶ್ರೀ ಎಂ. ಎನ್. ಗೋತೆ,** ಹಿಂದಿನ ತಹಶೀಲ್ದಾರ್, ಜೇವರ್ಗಿ ತಾಲ್ಲೂಕು, ಹಾಲಿ ನಿವೃತ್ತ ಇವರ ವಿರುದ್ಧದ ಆರೋಪಗಳಿಗೆ ವಿಚಾರಣೆ ನಡೆಸಲು ಪ್ರಕರಣವನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 214(2)(ಬಿ)() ರಡಿ ಗೌರವಾನ್ವಿತ ಉಪಲೋಕಾಯುಕ್ತರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ, ಸರ್ಕಾರಿ ಆದೇಶವನ್ನು ನೀಡಿರುವ ಮೇರೆಗೆ, ಮಾನ್ಯ ಉಪಲೋಕಾಯುಕ್ತರವರು ದಿನಾಂಕ: 11/01/2018 ರಂದು ಅಪರ ನಿಬಂಧಕರು, ವಿಚಾರಣೆಗಳು–10 ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸಲು ಆದೇಶಿಸಿರುತ್ತಾರೆ.

3. ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ ರವರ ವಿರುದ್ಧ ದೋಷಾರೋಪಣೆ (Article of Charge) ಅನ್ನು ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌ ರವರಿಗೆ ದಿನಾಂಕ: 09/03/2018 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

**ಅನುಬಂಧ-1**

**ದೋಷಾರೋಪಣೆ-1**

ಆಪಾದಿತ ಸರ್ಕಾರಿ ನೌಕರರಾದ **ಶ್ರೀ ಎಂ. ಎನ್. ಗೋತೆ,** ಹಿಂದಿನ ತಹಶೀಲ್ದಾರ್, ಜೇವರ್ಗಿ ತಾಲ್ಲೂಕು (ಹಾಲಿ ನಿವೃತ್ತ) ಆದ ನೀವು ಜೇವರ್ಗಿ ತಾಲ್ಲೂಕಿನಲ್ಲಿ ಹರಿದು ಹೋಗಿರುವ ಭೀಮಾನದಿ ತೀರದಲ್ಲಿ ಅಕ್ರಮ ಮರಳು ಸಂಗ್ರಹಿಸಿ ಕಳ್ಳತನದಿಂದ ಸಾಗಣಿಕೆ ಮಾಡುತ್ತಿರುವುದು ಕಂಡು ಬಂದ ಮೇರೆಗೆ ತನಿಖಾಧಿಕಾರಿಯವರು ನಿಮ್ಮನ್ನು ಕರೆಯಿಸಿ, ಸರ್ಕಾರಿ ಪ್ರಾಢಶಾಲೆಯ ಆವರಣದಲ್ಲಿ ಟಿಪ್ಪರ್ ಗಳನ್ನು ನಿಲ್ಲಿಸಿ ಪಕ್ಕದ ಖುಲ್ಲಾ ಜಾಗದಲ್ಲಿ ಅಕ್ರಮ ಮರಳು ಸಂಗ್ರಹಿಸಿ, ಟಿಪ್ಪರ್‌ಗೆ ಜೆಸಿಬಿಯಿಂದ ಮರಳು ತುಂಬುತ್ತಿರುವುದು ಕಂಡು ಬಂದಿದ್ದರಿಂದ ಅವರ ವಿರುದ್ಧ ಸೂಕ್ತ ಕ್ರಮ ಕೈಗೊಂಡು ವರದಿ ಸಲ್ಲಿಸುವಂತೆ ಸೂಚಿಸಿದ್ದರೂ ಸಹ ಕೆಎ-32 ಬಿ 7174 ರ ವಾಹನಕ್ಕೆ ಮಾತ್ರ ರೂ.25,000/- ದಂಡ ವಿಧಿಸಿ ಉಳಿದ ವಾಹನಗಳಿಗೆ ದಂಡ ವಿಧಿಸದೆ ಬಿಡುಗಡೆಗೊಳಿಸಿರುತ್ತೀರಿ ಹಾಗೂ ಅಕ್ರಮವಾಗಿ ಸಂಗ್ರಹ ಮಾಡಿದ್ದ 115 ಟಿಪ್ಪರ್‌ಗಳಷ್ಟು ಮರಳು ಸಂಗ್ರಹಣೆ ಮಾಡಿದ್ದರೂ ಸಹ ಯಾವುದೇ ಪರಿಣಾಮಕಾರಿ ಕ್ರಮ ಕೈಗೊಂಡಿರುವುದಿಲ್ಲ.

ಆದಕಾರಣ ಆಪಾದಿತ ಸರ್ಕಾರಿ ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯಪಾಲನೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಸ್ವಂತ ಲಾಭಕ್ಕಾಗಿ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಆಪಾದಿತ ಸರ್ಕಾರಿ ನೌಕರರಾದ ನೀವು ಕರ್ನಾಟಕ ಸರ್ಕಾರಿ ಸೇವಾ (ನಡತೆ) ನಿಯಮಾವಳಿ 1966ರ ನಿಯಮ (3)(1)ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದೀರಿ.

## *ಅನುಬಂಧ-2*

## ದೋಷಾರೋಪಣೆಯ ವಿವರ

(ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್‌ಕಾಂಡಕ್ಟ್)

1) ಗೌರವಾನ್ವಿತ ಉಪಲೋಕಾಯುಕ್ತರವರು ಗುಲ್ಬರ್ಗಾ ಜಿಲ್ಲೆಯ ಅಫ್ಜಲ್‌ಪುರ ಹಾಗೂ ಜೇವರ್ಗಿ ತಾಲ್ಲೂಕುಗಳಲ್ಲಿ ಹರಿದು ಹೋಗುವ ಭೀಮಾ ನದಿಯ ತೀರದಲ್ಲಿ ಅಕ್ರಮ ಮರಳು ಸಾಗಾಣಿಕೆ ನಡೆಯುತ್ತಿದೆ ಎಂಬ ಪತ್ರಿಕಾ ಪ್ರಕಟಣೆಯನ್ನಾಧರಿಸಿ, ಅನಾಮಧೇಯರೊಬ್ಬರು ದೂರನ್ನು ಮಾನ್ಯ ಮುಖ್ಯ ಮಂತ್ರಿಗಳು, ಕರ್ನಾಟಕ ಸರ್ಕಾರ ಹಾಗೂ ಅದರ ಪ್ರತಿಯನ್ನು ಈ ಸಂಸ್ಥೆಗೆ ಸಲ್ಲಿಸಿದ್ದು, ಸದರಿ ದೂರನ್ನು ಸ್ವಯಂ ಪ್ರೇರಿತ ತನಿಖೆಗೊಳಪಡಿಸಿ ಆಪಾದಿತ ಸರ್ಕಾರಿ ನೌಕರರ ವಿರುದ್ಧ ಕ್ರಮಕ್ಕಾಗಿ ಆದೇಶಿಸಿರುತ್ತಾರೆ.

2) ಮೇಲ್ಕಂಡಂತೆ ನೀಡಲಾದ ದೂರಿನ ಅಂಶಗಳನ್ನು ಪರಿಗಣಿಸಿ, ಗೌರವಾನ್ವಿತ ಉಪಲೋಕಾಯುಕ್ತರವರು, ದೂರನ್ನು ಪರಿಶೀಲಿಸಿ, ಸ್ಥಳಕ್ಕೆ ಬೇಟಿ ನೀಡಿ ವಿಚಾರಣೆ ನಡೆಸಿ, ವರದಿ ಸಲ್ಲಿಸಲು ಪೊಲೀಸ್ ಅಧೀಕ್ಷಕರು, ಕಲೋ, ಗುಲ್ಬರ್ಗಾರವರಿಗೆ ಸೂಚಿಸಿರುತ್ತಾರೆ.

3) ಎಸ್.ಪಿ., ಕಲೋ, ಗುಲ್ಬರ್ಗಾರವರು ದಿ: 04.07.2013ರ ತಮ್ಮ ತನಿಖಾ ವರದಿ ಸಲ್ಲಿಸಿ ನದಿ ದಂಡೆಯಲ್ಲಿ ನದಿ ಹಾಳಾಗುವ ಮಟ್ಟದಲ್ಲಿ ಮರಳನ್ನು ತೆಗೆದು, ಸಂಗ್ರಹಿಸಿ ಅಕ್ರಮವಾಗಿ

ಸಾಗಾಣಿಕೆ ಮಾಡಿರುವುದು ಕಂಡು ಬಂದಿದೆ. ಇತ್ತೀಚೆಗೆ ಡಿ.ಸಿ.ರವರು ಅಕ್ರಮ ಮರಳು ಸಾಗಾಣಿಕೆ ಬಗ್ಗೆ ಸಾಕಷ್ಟು ಮುತುವರ್ಜಿ ವಹಿಸಿ, ಸಂಬಂಧಪಟ್ಟ ಅಧಿಕಾರಿಗಳ ಸಭೆ ನಡೆಸಿ, ಅಕ್ರಮ ಮರಳು ಸಾಗಾಣಿಕೆ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಆದೇಶಿಸಿದ್ದರೂ ಸಹಾ ಆ.ಸ.ನೌಕರರು ಸಿಬ್ಬಂದಿ ಕೊರತೆ ತೋರಿಸಿ, ಮುತುವರ್ಜಿ ವಹಿಸಿಲ್ಲವೆಂಬುದು ತನಿಖೆಯಿಂದ ದೃಢಪಟ್ಟಿದೆ ಎಂದು ವರದಿ ನೀಡಿದ್ದು, ಸದರಿ ವರದಿಗೆ ಆ.ಸ.ನೌಕರರ ಆಕ್ಷೇಪಣೆ ಕೇಳಲಾಯಿತು.

4) ಆಪಾದಿತ ಸರ್ಕಾರಿ ನೌಕರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿದ್ದು, ತಮ್ಮ ವಿರುದ್ಧ ಮಾಡಲಾಗಿರುವ ಆರೋಪಗಳನ್ನು ನಿರಾಕರಿಸಿ, ತಮ್ಮ ವಿರುದ್ಧದ ಪ್ರಕರಣವನ್ನು ಕೈಬಿಡುವಂತೆ ಕೋರಿರುತ್ತಾರೆ.

5) ಆಪಾದಿತ ಸರ್ಕಾರಿ ನೌಕರರು ತಮ್ಮ ಆಕ್ಷೇಪಣೆಯಲ್ಲಿ ತಮಗೆ ತಹಸೀಲ್ದಾರ್, ಜೇವರ್ಗಿಯಾಗಿ ಕಾರ್ಯ ನಿರ್ವಹಿಸಲು ಒಂದರೆಡು ತಿಂಗಳ ಅವಕಾಶ ಮಾತ್ರ ದೊರೆಯಿತು ಎಂದು ಹೇಳಿದ್ದು, ಅದಕ್ಕೆ ಪೂರಕ ದಾಖಲಾತಿ ಹಾಜರುಪಡಿಸಿದ್ದು, ಆ ಪ್ರಕಾರವಾಗಿ ಆಪಾದಿತ ಸರ್ಕಾರಿ ನೌಕರರು ದಿ:09.04.2013 ರಿಂದ 02.09.2013ರವರೆಗೆ ತಹಸೀಲ್ದಾರ್, ಜೇವರ್ಗಿಯಾಗಿ ಕಾರ್ಯ ನಿರ್ವಹಿಸಿರುವುದು ಕಂಡು ಬರುತ್ತದೆ. ಸದರಿ ಅವಧಿಯಲ್ಲಿ ವಿಧಾನಸಭಾ ಚುನಾವಣೆ ಸಹ ನಡೆದಿರುವುದರಿಂದ, ಸದರಿ ಚುನಾವಣಾ ಕಾರ್ಯ ಪರಿಗಣಿಸಿದಲ್ಲಿ, ಆಪಾದಿತ ಸರ್ಕಾರಿ ನೌಕರರು ತಮಗೆ ಕಾರ್ಯ ನಿರ್ವಹಿಸಲು ಒಂದರೆಡು ತಿಂಗಳುಗಳ ಅವಕಾಶ ದೊರೆಯಿತು ಎಂಬ ಅವರ ವಿವರಣೆ ಒಪ್ಪಬಹುದಾಗಿದ್ದರೂ ಸಹಾ, ಸದರಿ ಅವಧಿಯಲ್ಲಿ ಅಕ್ರಮ ಮರಳು ಸಾಗಾಣಿಕೆ ತಡೆಯಲು ಸೂಕ್ತ ಕ್ರಮ ಕೈಗೊಂಡಿರುವುದು ತನಿಖಾ ವರದಿಯ ಹಿನ್ನೆಲೆಯಲ್ಲಿ ಅನುಮಾನಾಸ್ಪದವಾಗಿ ಕಂಡು ಬರುತ್ತದೆ ಹಾಗೂ ಮೇಲ್ನೋಟಕ್ಕೆ ಆಪಾದಿತ ಸರ್ಕಾರಿ ನೌಕರರು ಅಕ್ರಮ ಮರಳು ಸಾಗಾಣಿಕೆ ವಿರುದ್ಧ ಸೂಕ್ತ ಕ್ರಮ ಕೈಗೊಂಡಿಲ್ಲವೆಂಬುದು ಕಂಡು ಬರುತ್ತದೆ.

6) ತನಿಖಾ ವರದಿಯಲ್ಲಿ ಅಕ್ರಮವಾಗಿ ಮರಳು ಸಂಗ್ರಹಿಸಿ ಕಳ್ಳತನದಿಂದ ಸಾಗಾಣಿಕೆ ಮಾಡುತ್ತಿರುವುದು ಕಂಡು ಬಂದ ಮೇರೆಗೆ ಸದರಿ ಸ್ಥಳಕ್ಕೆ ಆಪಾದಿತ ಸರ್ಕಾರಿ ನೌಕರರನ್ನು, ಶ್ರೀ. ಜಿ.ಇ. ಶಿವಲಿಂಗಪ್ಪ ಹಾಗೂ ಶ್ರೀ ಸುಧೀರ್ ಕುಮಾರ್.ಎಂ.ಬೆಂಕಿ, ಜೇವರ್ಗಿ ಪೊಲೀಸ್ ಠಾಣೆ, ಜೇವರ್ಗಿ, ಜೇವರ್ಗಿ ತಾಲ್ಲೂಕು, ಕಲ್ಬುರ್ಗಿ ಜಿಲ್ಲೆ, ಪ್ರಸ್ತುತ ಆಂತರಿಕ ಭದ್ರತಾ ವಿಭಾಗ, ಕಲ್ಬುರ್ಗಿರವರನ್ನು ತನಿಖಾಧಿಕಾರಿ ಕರೆಯಿಸಿ ಸರ್ಕಾರಿ ಪ್ರೌಢಶಾಲೆಯ ಆವರಣದಲ್ಲಿ ಟಿಪ್ಪರ್‌ಗಳನ್ನು ನಿಲ್ಲಿಸಿ ಪಕ್ಕದ ಖುಲ್ಲಾ ಜಾಗದಲ್ಲಿ ಅಕ್ರಮ ಮರಳು ಸಂಗ್ರಹಿಸಿ, ಟಿಪ್ಪರ್‌ಗೆ ಜೆ.ಸಿ.ಬಿ.ಯಿಂದ ಮರಳು ತುಂಬುತ್ತಿರುವುದು ಕಂಡು ಬಂದಿದ್ದರಿಂದ, ಅವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಂಡು ವರದಿ ಸಲ್ಲಿಸುವಂತೆ ಸೂಚಿಸಿದ್ದರೂ ಸಹಾ ಕೇವಲ ಕೆಎ–32–ಬಿ–7174ರ ವಾಹನಕ್ಕೆ ಮಾತ್ರ ರೂ.25,000/– ದಂಡ ವಿಧಿಸಿ ಉಳಿದ ವಾಹನಗಳಿಗೆ ದಂಡ ವಿಧಿಸದೇ ಬಿಡುಗಡೆಗೊಳಿಸಿದ್ದಾರೆ ಹಾಗೂ ಅಕ್ರಮವಾಗಿ ಸಂಗ್ರಹ ಮಾಡಿದ್ದ 115 ಟಿಪ್ಪರ್‌ಗಳಷ್ಟು ಮರಳು ಸಂಗ್ರಹಣೆ ಮಾಡಿದ್ದರೂ ಸಹಾ ಯಾವುದೇ ಪರಿಣಾಮಕಾರಿ ಕ್ರಮ ಕೈಗೊಂಡಿಲ್ಲವೆಂದು ಆಪಾದಿಸಿದ್ದರೂ ಸಹಾ ಆಪಾದಿತ ಸರ್ಕಾರಿ ನೌಕರರು, ಶ್ರೀ. ಜಿ.ಇ. ಶಿವಲಿಂಗಪ್ಪ ಹಾಗೂ ಶ್ರೀ ಸುಧೀರ್ ಕುಮಾರ್.ಎಂ.ಬೆಂಕಿ, ಜೇವರ್ಗಿ ಪೊಲೀಸ್ ಠಾಣೆ, ಜೇವರ್ಗಿ, ಜೇವರ್ಗಿ ತಾಲ್ಲೂಕು, ಕಲ್ಬುರ್ಗಿ ಜಿಲ್ಲೆ, ಪ್ರಸ್ತುತ ಆಂತರಿಕ ಭದ್ರತಾ ವಿಭಾಗ, ಕಲ್ಬುರ್ಗಿ ರವರು ತಾವು ಅಕ್ರಮ ಮರಳು ಸಂಗ್ರಹ ಹಾಗೂ ಸಾಗಾಣಿಕೆ ವಿರುದ್ಧ ತಾವು ಕೈಗೊಂಡ ಕ್ರಮದ ಬಗ್ಗೆ ಮಾತ್ರ ಆಕ್ಷೇಪಣೆಯಲ್ಲಿ ಹೇಳಿದ್ದು ತಮ್ಮ ವಿರುದ್ಧದ ಸದರಿ ನಿರ್ದಿಷ್ಟ ಆಪಾದನೆಗೆ ಸಂಬಂಧಪಟ್ಟಂತೆ ಒಪ್ಪಬಹುದಾದ ಯಾವುದೇ ಆಕ್ಷೇಪಣೆ ಅಥವಾ ವಿವರಣೆ ನೀಡಿಲ್ಲದೆ ಇರುವುದರಿಂದ ಆಪಾದಿತ ಸರ್ಕಾರಿ ನೌಕರರ ವಿರುದ್ಧ ಮಾಡಿರುವ ಆಪಾದನೆಗಳು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ.

7) ಆದುದರಿಂದ, ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಆಪಾದಿತ ಸರ್ಕಾರಿ ನೌಕರರು ಸಾರ್ವಜನಿಕ/ ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ

ಕರ್ತವ್ಯ ನಿಷ್ಠೆ ಮತ್ತು ಸಾರ್ವಜನಿಕ/ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವರ್ತನೆ/ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

8) ಆಪಾದಿತ ಸರ್ಕಾರಿ ನೌಕರರು ದಿ: 31.05.2015ರಂದು ನಿವೃತ್ತಿ ಹೊಂದಿರುತ್ತಾರೆ. ಸದರಿ ದೂರಿನ ಅವಧಿಯು 2013ನೇ ಇಸವಿಯದ್ದಾಗಿದ್ದು, ಘಟನಾ ದಿನಾಂಕದಿಂದ 4 ವರ್ಷದ ಅವಧಿ 2017ನೇ ಇಸವಿಗೆ ಮುಗಿಯುವುದಿದ್ದು, ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ಕೈಗೊಳ್ಳಲು ಅನುವಾಗುವಂತೆ ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 214(2)(ಬಿ)(2) ಪ್ರಕಾರ ಅನುಮತಿ ಪಡೆದಿರುತ್ತದೆ.

9) ಆದಕಾರಣ, **ಆಪಾದಿತ ಸರ್ಕಾರಿ ನೌಕರ–1 ಶ್ರೀ ಎಂ.ಎನ್. ಗೋತೆ,** ಹಿಂದಿನ ತಹಶೀಲ್ದಾರ್, ಜೇವರ್ಗಿ ತಾಲ್ಲೂಕು (ಹಾಲಿ ನಿವೃತ್ತ) ರವರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(1)ರಲ್ಲಿ ಹೇಳಿದಂತೆ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುವುದು ಕಂಡುಬರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎರ ಅಡಿಯಲ್ಲಿ ಇಲಾಖಾ ವಿಚಾರಣೆಯನ್ನು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿ, ಆಪಾದಿತ ಸರ್ಕಾರಿ ನೌಕರರ ವಿರುದ್ಧ 214(2)(ಬಿ)(i) ಅಡಿಯಲ್ಲಿ ಇಲಾಖಾ ವಿಚಾರಣೆಯನ್ನು ನಡೆಸಲು ಶಿಸ್ತು ಪ್ರಾಧಿಕಾರಿಯಾದ ಸರ್ಕಾರ ಉಲ್ಲೇಖ (2)ರ ಆದೇಶದಲ್ಲಿ ಗೌರವಾನ್ವಿತ ಉಪಲೋಕಾಯುಕ್ತರವರಿಗೆ ವಹಿಸಿದ್ದು, ಗೌರವಾನ್ವಿತ ಉಪಲೋಕಾಯುಕ್ತರವರು ಅಪರ ಸಿಬಂಧಕರು ವಿಚಾರಣೆಗಳು 10 ಇವರನ್ನು ವಿಚಾರಣೆ ನಡೆಸಲು ನೇಮಕ ಮಾಡಿದ್ದಾರೆ. **ಆದ್ದರಿಂದ ನಿಮ್ಮ ವಿರುದ್ಧ ಈ ಮೇಲ್ಕಂಡ ಆಪಾದನೆ.**

4. ಈ ಮೇಲ್ಕಂಡ ದೋಷಾರೋಪಣೆ (ಆರ್ಟಿಕಲ್ ಆಫ್ ಚಾರ್ಜ್) ಆ.ಸ.ನೌ ರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌ ರವರು ದಿನಾಂಕ 01/08/2018 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿದ್ದು, ಅವರ ಪ್ರಥಮ ಮೌಖಿಕ ಹೇಳಿಕೆಯನ್ನು ನಿಯಮ-11(9) ಕೆ.ಸಿ.ಎಸ್. ಸಿಸಿಎ ರೂಲ್ಸ್ 1957ರ ಅಡಿಯಲ್ಲಿ ದಾಖಲಿಸಿಕೊಳ್ಳಲಾಗಿರುತ್ತದೆ. ಆ.ಸ.ನೌ ರವರು ತಪ್ಪೊಪ್ಪಿಕೊಳ್ಳದೆ ಆರೋಪಗಳ ವಿಚಾರಣೆಯನ್ನು ಬಯಸಿರುತ್ತಾರೆ.

5. ಆ.ಸ.ನೌ ರವರಿಗೆ ದಾಖಲೆಗಳ ಪರಿಶೀಲನೆ ಮತ್ತು ಶೋಧನೆಗಾಗಿ ಅವಕಾಶ ಕಲ್ಪಿಸಲಾಗಿರುತ್ತದೆ.

6. ಆ.ಸ.ನೌ ರವರು ತಮ್ಮ ಲಿಖಿತ ರಕ್ಷಣಾ ಹೇಳಿಕೆಯನ್ನು ದಿನಾಂಕ 01/08/2018 ರಂದು ಸಲ್ಲಿಸಿ, ದೋಷಾರೋಪಣೆಯಲ್ಲಿ ಮಾಡಿರುವ ಆರೋಪಗಳನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ,

7. ಈ ವಿಚಾರಣೆಯಲ್ಲಿ, ಆ.ಸ.ನೌ ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ **ತನಿಖಾಧಿಕಾರಿ ಶ್ರೀ ಜೇಮ್ಸ್ ಮಿನೇಜಸ್** ರವರನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷ್ಯ ನುಡಿಸಿಕೊಂಡು **ನಿ.ಪಿ.-1 ರಿಂದ 5** ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ. ತದನಂತರ, ಆ.ಸ.ನೌ ರವರ ದ್ವಿತೀಯ ಮೌಖಿಕ ಹೇಳಿಕೆಯನ್ನು ದಿನಾಂಕ 20/03/2021 ರಂದು ಪಡೆದುಕೊಳ್ಳಲಾಗಿರುತ್ತದೆ.

8. ಆಪಾದಿತ ಸರ್ಕಾರಿ ನೌಕರ ಶ್ರೀ **ಎಂ.ಎನ್. ಗೋತೆ,** ಹಿಂದಿನ ತಹಶೀಲ್ದಾರ್, ಜೇವರ್ಗಿ ತಾಲ್ಲೂಕು (ಹಾಲಿ ನಿವೃತ್ತ) ರವರು ತಮ್ಮ ಪರವಾಗಿ ತಾವೇ **ಡಿ.ಡಬ್ಲ್ಯೂ.-1** ಎಂದು ವಿಚಾರಣೆ ಮಾಡಿಕೊಂಡು ನಿ.ಡಿ-1 ರಿಂದ ನಿ.ಡಿ-5 ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ.

9. ಉಭಯ ಪಕ್ಷದವರ ಪರವಾಗಿ ಮಂಡನಾಧಿಕಾರಿಗಳ ವಾದ ವಿವಾದವನ್ನು ಮತ್ತು ಆ.ಸ.ನೌ ರವರ ಪರ ಲಿಖಿತ ವಾದವನ್ನು ಪರಿಶೀಲಿಸಲಾಯಿತು.

10. ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌ ರವರ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತು ಪಡಿಸಿದೆಯೇ?

**ಅಂಶ–2:** ಆದೇಶವೇನು?

11. ವಾದ ವಿವಾದದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

12. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ.

**ಅಂಶ 1: ಸಕರಾತ್ಮಕವಾಗಿ**

**ಅಂಶ 2: ಅಂತಿಮ ಆದೇಶದಂತೆ**

**ಕಾರಣಗಳು:**

13. ಈ ವಿಚಾರಣೆಯಲ್ಲಿ, ಆ.ಸ.ನೌ ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ **ತನಿಖಾಧಿಕಾರಿ ಶ್ರೀ ಜೇಮ್ಸ್ ಮಿನೇಜಸ್** ರವರನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷ್ಯ ನುಡಿಸಿಕೊಂಡು **ನಿ.ಪಿ.–1 ರಿಂದ 5** ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ.

14. ತನಿಖಾಧಿಕಾರಿ ಪಿ.ಡಬ್ಲ್ಯೂ–1 ಶ್ರೀ **ಜೇಮ್ಸ್ ಮಿನೇಜಸ್, ಪೊಲೀಸ್ ಉಪಾಧೀಕ್ಷಕರು,** ಕರ್ನಾಟಕ ಲೋಕಾಯುಕ್ತ, ಕಲಬುರ್ಗಿ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 19/06/2013 ರಂದು ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಕಲ್ಬುರ್ಗಿ ರವರು ಒಂದು ದೂರು ಅರ್ಜಿಯನ್ನು ನೀಡಿದ್ದು, ಸದರಿ ದೂರು ಅರ್ಜಿಯನ್ನು ವಿಚಾರಣೆ ಮಾಡಿ ವರದಿ ಕೈಗೊಳ್ಳುವಂತೆ ಸೂಚಿಸಿದ್ದು, ಅದರಂತೆ ತಾನು ದಿನಾಂಕ 19–06–2013ರಂದು ಜೇವರ್ಗಿ ತಾಲ್ಲೂಕಿನ

e26\\1

ಕೋಲ್ಲೂರು ಗ್ರಾಮಕ್ಕೆ ಭೇಟಿ ನೀಡಿದಾಗ ಅಲ್ಲಿ ಸರ್ಕಾರಿ ಶಾಲೆ ಆವರಣದಲ್ಲಿ 3 ಟಿಪ್ಪರುಗಳು ನಿಂತಿದ್ದು, ಅವುಗಳ ಕೆ.ಎ-32 ಬಿ-6124, ಕೆಎ-32ಬಿ 8135, ಕೆ.ಎ-32ಬಿ 7172 ಅವುಗಳು ನಿಂತಿದ್ದು ಶಾಲೆಯ ಪಕ್ಕದ ಕುಲ್ಲಾ ಜಾಗದಲ್ಲಿ ಮರಳು ಸಂಗ್ರಹಣೆ ಮಾಡಿದ್ದು, ಅಲ್ಲಿ ಕೆಎ-32ಬಿ 7174ಟಿಪ್ಪರಿಗೆ ಜೆಸಿಬಿ ನಂ1840847 ಮರಳು ತುಂಬುತ್ತಿದ್ದು, ಸದರಿ ಜೆಸಿಬಿ ಚಾಲಕ ಮತ್ತು ಕ್ಲಿನರ್ ಅವರನ್ನು ಕೂರಿಸಲಾಯಿತೆಂದು ಸಾಕ್ಷ್ಯ ನುಡಿದಿರುತ್ತಾರೆ.

15. ಪಿಡಬ್ಲ್ಯೂ-1 ರವರ ಮುಂದುವರೆದ ಮುಖ್ಯ ಸಾಕ್ಷ್ಯದಲ್ಲಿ, ನಂತರ ತಹಶೀಲ್ದಾರರು ಮತ್ತು ಎಇಇ, ಪಿಡಬ್ಲ್ಯೂಡಿ, ಪಿಎಸ್.ಐ ಜೇವರ್ಗಿ ರವರಿಗೆ ಫೋನ್ ಮುಖಾಂತರ ಬರಮಾಡಿಕೊಂಡು ಶಾಲೆ ಅವರಣದಲ್ಲಿ ನಿಲ್ಲಿಸಿದ 4 ಟಿಪ್ಪರುಗಳನ್ನು, 1 ಜೆ.ಸಿ.ಬಿ ಹಾಗೂ ಮರಳು ತುಂಬುತ್ತಿದ್ದ ಚಾಲಕ ಮತ್ತು ಕ್ಲಿನರ್‌ನ್ನು ಸದರಿ ಅಧಿಕಾರಿಯ ವಶಕ್ಕೆ ಕೊಟ್ಟು, ಸದರಿ ಅಕ್ರಮ ಮರಳು ಸಂಗ್ರಹಣೆ ಮಾಡಿದ ಬಗ್ಗೆ ಜಾಗ ತೋರಿಸಿ, ಸೂಕ್ತ ಕಾನೂನು ಕ್ರಮ ಜರುಗಿಸಿ ವರದಿ ಸಲ್ಲಿಸಲು ಕೋರಲಾಯಿತು, ನಂತರ ಅದನ್ನು ಎಇಇ, ಪಿಡಬ್ಲ್ಯೂಡಿ ರವರು ತಮ್ಮ ಪತ್ರ ದಿ:21-06-2013ರಲ್ಲಿ ಆರಕ್ಷಕ ಉಪನಿರೀಕ್ಷರು ಜೇವರ್ಗಿ ರವರಿಗೆ ಕೋಲ್ಲೂರು ಗ್ರಾಮದಲ್ಲಿ ಅನಧಿಕೃತ ಮರಳು ಸಾಗಾಣಿಕೆ ವಿಷಯ ಪರಿಶೀಲಿಸಿ ವಾಹನ ಸಂಖ್ಯೆಕೆ.ಎ 32ಬಿ 7174 ವಾಹನಕ್ಕೆ ದಿ:20-06-2013ರಂದು ರೂ.25,000/- ದಂಡ ವಿಧಿಸಿ ಎಲ್ಲಾ ವಾಹನಗಳನ್ನು ಬಿಡುಗಡೆ ಮಾಡಲು ಪತ್ರ ಬರೆದಿರುತ್ತಾರೆ.

16. ಪಿಡಬಬ್ಲ್ಯೂ-1 ರವರ ಮುಂದುವರೆದ ಮುಖ್ಯ ಸಾಕ್ಷ್ಯದಲ್ಲಿ, ತಹಶೀಲ್ದಾರರು ದಿನಾಂಕ: 19-06-2013ರಲ್ಲಿ ಕೋಲ್ಲೂರು ಸರ್ಕಾರಿ ಪ್ರೌಢ ಶಾಲೆ ಆವರಣ ಮತ್ತು ಶ್ರೀ ಬೀರಲಿಂಗೇಶ್ವರ ದೇವಾಲಯದ ಬಳಿ ಸುಮಾರು 115 ಟಿಪ್ಪರ್‌ಗಳಷ್ಟು ಮರಳು ಸಾಗಾಣಿಕೆ ಅಂತ ಪ್ರಸ್ತಾಪಿಸಿದ್ದು ಅದನ್ನು ಎಇಇ, ಪಿಡಬ್ಲ್ಯೂಡಿ ರವರ ಅಧೀನ ನೀಡಿದ್ದು, ಜಪ್ತಿ ಮಾಡಲಾದ ಮರಳು ಅಕ್ರಮವಾಗಿ ಸಾಗಾಣಿಕೆ ಆಗದಂತೆ ಸೂಚಿಸಿದರು ಹಾಗೂ ಜಪ್ತಿ ಮಾಡಿದ ವಾಹನಗಳನ್ನು ಪಿ.ಎಸ್.ಐ. ಜೇವರ್ಗಿರವರ ಅಧೀನಕ್ಕೆ ನೀಡಿರುತ್ತಾರೆ, ಆದರೆ ಯಾವುದೇ ಪರಿಣಾಮಕಾರಿ ಕ್ರಮ ತೆಗೆದುಕೊಂಡಿರುವುದು ತನ್ನ ವಿಚಾರಣೆಯಲ್ಲಿ ಕಂಡು ಬಂದಿರುವುದಿಲ್ಲವೆಂದು ವರದಿಯನ್ನು ದಿ:

29-06-2013 ರಂದು ಮಾನ್ಯ ಎಸ್‌ಪಿ ಲೋಕಾಯುಕ್ತ ಗುಲ್ಬರ್ಗಾ ರವರಿಗೆ ಸಲ್ಲಿಸಿದ್ದು, ಅದು **ನಿ.ಪಿ-1** ಎಂದು, ಎಸ್‌ಪಿರವರು ತಮ್ಮ ಕವರಿಂಗ್ ಲೆಟರ್ ಮೂಲಕ ಲೋಕಾಯುಕ್ತ ಕಛೇರಿಗೆ ಸಲ್ಲಿಸಿದ ಪತ್ರ **ನಿ.ಪಿ-2** ಎಂದು ಗುರುತಿಸಲಾಗಿರುತ್ತದೆ.

17. ಪಿಡಬಬ್ಲ್ಯೂ-1 ರವರ ಮುಂದುವರೆದ ಸಾಕ್ಷ್ಯದಲ್ಲಿ, ತಹಶೀಲ್ದಾರ ಜೇವರ್ಗಿರವರು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಿಡಬ್ಲ್ಯೂಡಿ ಜೇವರ್ಗಿ ರವರಿಗೆ ಸುಮಾರು 115 ಟಿಪ್ಪರ್‌ಗಳಷ್ಟು ಅಕ್ರಮ ಮರಳು ಶಾಲಾ ಆವರಣದಲ್ಲಿ ಅಕ್ರಮವಾಗಿ ಸಂಗ್ರಹಿಸಿದ್ದು, ಅದು ಸಾಗಾಣಿಕೆ ಆಗದಂತೆ ನೋಡಿಕೊಳ್ಳುವಂತೆ ಪಿಎಸ್‌ಐ ಜೇವರ್ಗಿ ರವರಿಗೆ ಸೂಚಿಸಿ ಮತ್ತು ಜಪ್ತಿ ಮಾಡಿದ ವಾಹನಗಳ ಕುರಿತಂತೆ ಪತ್ರ **ನಿ.ಪಿ-3** ಎಂದು, ಎಇಇ, ಪಿಡಬ್ಲ್ಯೂಡಿ ರವರು ತಮ್ಮ ಪತ್ರ ದಿ:21-06-2013ರಲ್ಲಿ ಆರಕ್ಷಕ ಉಪನಿರೀಕ್ಷಕರು ಜೇವರ್ಗಿ ರವರಿಗೆ ವಾಹನ ಸಂಖ್ಯೆ:ಕೆಎ32ಬಿ 7174 ವಾಹನಕ್ಕೆ ರೂ.25000/- ದಂಡ ತುಂಬಿಸಿಕೊಂಡು ಉಳಿದ ವಾಹನಗಳನ್ನು ಬಿಡುವಂತೆ ಬರೆದ ಪತ್ರ **ನಿ.ಪಿ-4** ಎಂದು, ಎಸ್.ಪಿ ರವರ ಪತ್ರಿಕಾ ಪ್ರಕಟಣೆಯ ತುಣುಕನ್ನು ನಕಲು ಮಾಡಿಸಿ ಅದನ್ನು ಮಾನ್ಯ ಮುಖ್ಯಮಂತ್ರಿ ರವರಿಗೆ ಕಳುಹಿಸಿಕೊಟ್ಟಿದ್ದು, ಸದರಿ ಪ್ರತಿಯನ್ನು ವಿಚಾರಣೆಗಾಗಿ ತನಗೆ ಕಳುಹಿಸಿದ್ದು, ಅದು **ನಿ.ಪಿ-5** ಎಂದು ಗುರುತಿಸಲಾಗಿರುತ್ತದೆ.

18. ಆಪಾದಿತ ಸರ್ಕಾರಿ ನೌಕರ ಶ್ರೀ ಎಂ. **ಎನ್. ಗೋತೆ, ಹಿಂದಿನ ತಹಶೀಲ್ದಾರ್, ಜೇವರ್ಗಿ ತಾಲ್ಲೂಕು, ಹಾಲಿ ನಿವೃತ್ತ** ರವರು ತಮ್ಮ ಪರವಾಗಿ ತಾವೇ **ಡಿ.ಡಬ್ಲ್ಯೂ.-1** ಎಂದು ಸಾಕ್ಷ್ಯ ನುಡಿದಿದ್ದು **ನಿ.ಡಿ-1** ರಿಂದ **ನಿ.ಡಿ-5** ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. **ನಿ.ಡಿ-1** ಅಧಿಕೃತ ಜ್ಞಾಪನ ಪತ್ರದ ದೃಢೀಕೃತ ಪ್ರತಿ ದಂಡ ವಸೂಲಿ ಮಾಡಿದ ಬಗ್ಗೆ, **ನಿ.ಡಿ-2** ದಂಡದ ಮೊತ್ತವನ್ನು ಡಿ.ಡಿ. ಮುಖಾಮತರ ಸರ್ಕಾರಕ್ಕೆ ಜಮಾ ಮಾಡದ ಬಗ್ಗೆ ಪ್ರತಿ, **ನಿ.ಡಿ-3** ಜಿಲ್ಲಾಧಿಕಾರಿಗಳು ಗುಲಬರ್ಗಾರವರ ಸ್ಯಾಂಡ್ ಮಾನಿಟರಿಂಗ್ ಕಮೀಟಿಯ ನಡವಳಿಕೆ ಪ್ರತಿ, **ನಿ.ಡಿ-4** ಸಹಾಯಕ ಕಾರ್ಯಪಲಕ ಅಭಿಯಂತರರು ದಿನಾಮಕ 10.07.2013 ರಂದು 1215 ಟಿಪ್ಪರ್ ಅನಧೀಕೃತ ಮರಳು

ಸಂಗ್ರಹ ಮಾಡಿದ್ದು, ತಮ್ಮ ವಶಕ್ಕೆ ಪಡೆದ ಬಗ್ಗೆ ತಹಶೀಲ್ದಾರ್, ಜೇವರ್ಗಿಯವರಿಗೆ ನೀಡಿದ ಪತ್ರದ ಪ್ರತಿ ಮತ್ತು ನಿ.ಡಿ–5 ದಿನಾಂಕ 19.07.2013 ರ ಜಿಲ್ಲಾಧಿಕಾರಿಗಳು ಗುಲಬರ್ಗಾರವರ ನಡವಳಿಕೆಗಳ ಪ್ರತಿ. ಆಪಾದಿತ ಸರ್ಕಾರಿ ನೌಕರರು ತಾನು ಸರಕಾರಿ ನೌಕರನಿಗೆ ಸಲ್ಲದ ರೀತಿಯಲ್ಲಿ ಮತ್ತು ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿಲ್ಲವೆಂದು ತಮ್ಮ ಮೇಲಿನ ಆರೋಪಗಳನ್ನು ಅಲ್ಲಗಳೆದಿರುತ್ತಾರೆ.

19. ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು 01/12/2021 ರಂದು ಆಪಾದಿತ ಸರ್ಕಾರಿ ನೌಕರರನ್ನು ಪಾಟೀ ಸವಾಲು ಮಾಡಿದಾಗ ಈ ಕೆಳಕಂಡಂತೆ ನುಡಿದಿರುತ್ತಾರೆ:

> " ಭೀಮಾ ನದಿ ತೀರದಲ್ಲಿ ಅಕ್ರಮ ಮರಳು ಸಾಗಾಣಿಕೆ ನಡೆಯುತ್ತಿದೆ ಎಂಬ ಪತ್ರಿಕಾ ಪ್ರಕಟಣೆಯನ್ನು ಆಧರಿಸಿ ಮತ್ತು ಅನಾಮಧೇಯ ವ್ಯಕ್ತಿಯೊಬ್ಬರು ಆ ಬಗ್ಗೆ ದೂರನ್ನು ಅಂದಿನ ಮುಖ್ಯಮಂತ್ರಿಗಳಿಗೆ ನೀಡಿದ್ದು, ಅದರ ಪ್ರತಿಯನ್ನು ಲೋಕಾಯುಕ್ತ ಸಂಸ್ಥೆಗೆ ನೀಡಿದ್ದು, ಸದರಿ ದೂರನ್ನು ಸ್ವಯಂಪ್ರೇರಿತ ತನಿಖೆಗೆ ಒಳಪಡಿಸಿ, ಈ ಪ್ರಕರಣದಲ್ಲಿ ತನಿಖೆಯಾಗಿರುತ್ತದೆ ಎಂದರೆ ಸರಿ. ಮಾನ್ಯ ಉಪಲೋಕಾಯುಕ್ತರವರು ಸದರಿ ದೂರನ್ನು ಪರಿಶೀಲಿಸಿ ಸ್ಥಳಕ್ಕೆ ಭೇಟಿ ನೀಡಿ, ವಿಚಾರಣೆ ನಡೆಸಿ ವರದಿ ಸಲ್ಲಿಸಲು ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ ಗುಲಬರ್ಗಾರವರಿಗೆ ಸೂಚಿಸಿದ್ದರು ಎಂದರೆ, ಸರಿ".

> "ಸದರಿ ಗುಲಬರ್ಗಾ ಲೋಕಾಯುಕ್ತ ಎಸ್.ಪಿರವರ ಆದೇಶದಂತೆ ಪೊಲೀಸ್ ಇನ್ಸ್‌ಪೆಕ್ಟರ್, ಲೋಕಾಯುಕ್ತ ಗುಲಬರ್ಗಾರವರು ಈ ದೂರಿನಲ್ಲಿ ತನಿಖೆ ಮಾಡಿರುತ್ತಾರೆ ಎಂದರೆ, ಸರಿ. ಸದರಿ ಆರಕ್ಷಕ ನಿರೀಕ್ಷಕರವರು ಸದರಿ ಪ್ರಕರಣದಲ್ಲಿ ತನಿಖೆ ಮಾಡಿ, ನಿ.ಪಿ–1ರಂತೆ ವರದಿ ಸಲ್ಲಿಸಿರುತ್ತಾರೆ ಎಂದರೆ,

ಸರಿ. ಸದರಿ ತಮ್ಮ ನಿ.ಪಿ–1ರ ವರದಿಯಲ್ಲಿ ತನಿಖಾಧಿಕಾರಿಯು ಜೇವರ್ಗಿ ತಾಲ್ಲೂಕಿನ ಕೋಳ್‌ಕೂರು ಗ್ರಾಮಕ್ಕೆ ಭೇಟಿ ನೀಡಿ ಜೇವರ್ಗಿ ತಾಲ್ಲೂಕಿನ ತಹಶೀಲ್ದಾರರಾದ ಆ.ಸ.ನೌಕರರಾದ ನನಗೆ ಮತ್ತು ಎ.ಇ.ಇ., ಲೋಕೋಪಯೋಗಿ ಮತ್ತು ಬಂದರು ಇಲಾಖೆ ಹಾಗೂ ಉಪವಿಭಾಗ, ಜೇವರ್ಗಿರವರಿಗೆ ಹಾಗೂ ಜೇವರ್ಗಿ ಪೊಲೀಸ್ ಠಾಣೆ ಪಿ.ಎಸ್.ಐ., ರವರಿಗೆ ಕರೆಸಿಕೊಂಡು ಸರ್ಕಾರಿ ಪ್ರೌಢ ಶಾಲೆಯ ಆವರಣದಲ್ಲಿ ಟಿಪ್ಪರ್‌ಗಳನ್ನು ನಿಲ್ಲಿಸಿ, ಪಕ್ಕದ ಖಿಲ್ಲಾ ಜಾಗೆಯಲ್ಲಿ, ಅಕ್ರಮ ಮರಳು ಸಂಗ್ರಹಿಸಿ, ಟಿಪ್ಪರ್‌ಗೆ ಜೆ.ಸಿ.ಬಿ.,ಯಿಂದ ಮರಳು ತುಂಬುತ್ತಿರುವುದು ಕಂಡುಬಂದಿರುತ್ತದೆ ಎಂದು ತಮ್ಮ ತನಿಖಾ ವರದಿಯಲ್ಲಿ ನಮೂದಿಸಿರುತ್ತಾರೆ ಎಂದರೆ, ನನಗೆ ಗೊತ್ತಿಲ್ಲ. ಆ ಬಗ್ಗೆ ನನಗೆ ಗೊತ್ತಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆಂದರೆ, ಸರಿಯಲ್ಲ. ಸದರಿ ಕೋಳ್‌ಕೂರು ಗ್ರಾಮದ ಸರ್ಕಾರಿ ಪ್ರೌಢ ಶಾಲೆಯ ಆವರಣದಲ್ಲಿ ಸುಮಾರು 115 ಟಿಪ್ಪರ್‌ಗಳಷ್ಟು ಮರಳು ಸಂಗ್ರಹಣೆ ಮಾಡಿದ್ದರೂ ಸಹ ನಾನು ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ ಎಂದರೆ, ಸರಿಯಲ್ಲ. ನಾನು ಅಕ್ರಮ ಮರಳು ಸಂಗ್ರಹಣೆ ತಡೆಗಟ್ಟುವಲ್ಲಿ ವಿಫಲನಾಗಿರುತ್ತೇನೆ ಎಂದರೆ, ಸರಿಯಲ್ಲ. ಮೇಲ್ಕಂಡಂತೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ, ಸರಿಯಲ್ಲ. ಈಗ ತೋರಿಸಿರುವ ನಿ.ಪಿ–3ರಲ್ಲಿ ಇರುವ ಸಹಿ ನನ್ನದೇ ಎಂದರೆ, ಸರಿ. ಸದರಿ ನಿ.ಪಿ–3ನ್ನು ನಾನು ಜಿಲ್ಲಾಧಿಕಾರಿಗಳು, ಗುಲಬರ್ಗಾರವರಿಗೆ ಬರೆದಿರುತ್ತೇನೆ ಎಂದರೆ, ಸರಿ. ಸದರಿ ನಿ.ಪಿ–3ರಲ್ಲಿ "ಕೋಳ್‌ಕೂರು ಗ್ರಾಮದ ಸರ್ಕಾರಿ ಪ್ರೌಢ ಶಾಲೆ ಆವರಣ ಮತ್ತು ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಸುಮಾರು 115 ಟಿಪ್ಪರ್‌ಗಳಷ್ಟು ಅಕ್ರಮ ಮರಳು ಸಂಗ್ರಹಣೆ ಮಾಡಿರುತ್ತಾರೆ" ಎಂದು ಬರೆದಿರುತ್ತೇನೆ ಎಂದರೆ, ಸರಿ. ಸದರಿ ಎಲ್ಲಾ ಮರಳನ್ನು ಎ.ಇ.ಇ., ಪಿಡಬ್ಲ್ಯೂಡಿ, ಜೇವರ್ಗಿ ಇವರ ವಶಕ್ಕೆ ಕೊಡುತ್ತಾ ಜಪ್ತಿ ಮಾಡಲಾದ

ವಾಹನಗಳನ್ನು ಜೇವರ್ಗಿ ಪಿ.ಎಸ್.ಐ.,ರವರ ವಶಕ್ಕೆ ನೀಡಿರುತ್ತೇನೆ ಎಂದು ನಿ.ಪಿ–3ರಲ್ಲಿ ನಮೂದಿಸಿರುತ್ತೇನೆ ಎಂದರೆ, ಸರಿ.

"ಈಗ ನನಗೆ ತೋರಿಸಿರುವ ದಾಖಲೆಯ ಮೇಲಿನ ಸಹಿ ನನ್ನದೆ ಆಗಿದ್ದು, ಸದರಿ ಅಧಿಕೃತ ಜ್ಞಾಪನವನ್ನು ನಾನೇ ಹೊರಡಿಸಿದ್ದು, ಅದನ್ನು ಈಗಾಗಲೇ ನಿಡಿ–1 ಎಂದು ಗುರುತಿಸಲಾಗಿದೆ. ಸದರಿ ನಿ.ಡಿ–1ರಲ್ಲಿ ವಾಹನಗಳ ಮಾಲೀಕರಿಂದ ಮುಚ್ಚಳಿಕೆ ಪತ್ರ ಪಡೆದು, ದಂಡ ಹಣ ಸಂಗ್ರಹಣೆ ಮಾಡಿದ ನಂತರ ಅವರಿಗೆ ವಾಹನ ಬಿಡುಗಡೆ ಮಾಡಿರುತ್ತೇನೆ. ನಾನು ಕೆಎ 32 ಬಿ 7174 ವಾಹನಕ್ಕಕ್ಕೆ ಮಾತ್ರ ರೂ.25,00 ದಂಡ ವಿಧಿಸಿದ್ದು, ಉಳಿದ ವಾಹನಗಳಿಗೆ ಈ ಪ್ರಕರಣದ ತನಿಖೆ ಕಾಲಕ್ಕೆ ಯಾವುದೇ ದಂಡ ವಿಧಿಸಿರಲಿಲ್ಲ ಹಾಗೂ ಅಕ್ರಮವಾಗಿ ಸಂಗ್ರಹ ಮಾಡಿದ್ದ 115 ಟಿಪ್ಪರ್ ಮರಳು ಸಂಗ್ರಹ ಮಾಡಿದ ಬಗ್ಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದರೆ, ಸರಿಯಲ್ಲ.

" ನಾನು ಹಾಗೂ ಶ್ರೀ ಜಿ.ಈ.ಶಿವಲಿಂಗಪ್ಪ ಎ.ಇ.ಇ., ಮತ್ತು ಶ್ರೀ ಸುಧೀರ್ ಕುಮಾರ್ ಬೆಂಕಿ, ಪಿ.ಎಸ್.ಐ., ಜೇವರ್ಗಿ ಪೊಲೀಸ್ ಠಾಣೆ ನಾವೆಲ್ಲರೂ ಅಕ್ರಮ ಮರಳು ಸಂಗ್ರಹಣೆ ಮತ್ತು ಸಾಗಾಣಿಕೆಯ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದರೆ, ನಾನು ಯಾವುದೇ ತಪ್ಪು ಮಾಡಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ".

" ನಿ.ಡಿ–5 ಪ್ರಕಾರ ಜಿಲ್ಲಾಧಿಕಾರಿಗಳು, ಗುಲಬರ್ಗಾರವರು ಸಂಗ್ರಹವಾದ ಮರಳಿಗೂ ರಾಜಸ್ವ ಸಂಗ್ರಹಣೆಯಲ್ಲಿ ವ್ಯತ್ಯಾಸವಿರುತ್ತದೆ ಎಂದು ತನಿಖೆ ಮಾಡಿ ವರದಿ ನೀಡುವಂತೆ ಆದೇಶ ಮಾಡಿರುತ್ತಾರೆ ಎಂದರೆ, ನನ್ನನ್ನೂ ಸೇರಿಸಿ ಆದೇಶ ಮಾಡಿರುತ್ತಾರೆ. ಸದರಿ ಆದೇಶದಂತೆ ವರದಿ ನೀಡಿದ್ದು, ಆದರೆ ಅದರ

ಪ್ರತಿಯನ್ನು ಹಾಜರುಪಡಿಸಿರುವುದಿಲ್ಲ. ನಾನು ತಹಶೀಲ್ದಾರನಾಗಿ ಜವಾಬ್ದಾರಿಯುತ ಹುದ್ದೆಯಲ್ಲಿದ್ದು, ಪತ್ರಿಕಾ ಪ್ರಕಟಣೆಯಲ್ಲಿ ಬರುವವರೆಗೆ ಅಕ್ರಮ ಮರಳು ಸಾಗಾಣಿಕೆ ಬಗ್ಗೆ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ ಎಂದರೆ, ಸರಿಯಲ್ಲ. ಸಾಕ್ಷಿ ನಿ.ಪಿ–5ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿದಾರರಿಗೆ ಅಕ್ರಮ ಮರಳು, ಸಾಗಾಣಿಕೆ ವಿಷಯದಲ್ಲಿ ತಾವು ಸೂಕ್ತ ಕ್ರಮ ಕೈಗೊಳ್ಳದೇ ಕರ್ತವ್ಯ ಲೋಪ ಎಸಗಿರುತ್ತೀರಿ ಎಂದು ಕೇಳಲಾಗಿ, ತಮ್ಮಿಂದ ಯಾವುದೇ ಕರ್ತವ್ಯ ಲೋಪವಾಗಿಲ್ಲವೆಂದು ಹೇಳುತ್ತಾರೆ".

26. ಪಿ.ಡಬ್ಲ್ಯೂ–1 ರವರ ಸಾಕ್ಷ್ಯ ನಿ.ಪಿ–1 ರಿಂದ ನಿ.ಪಿ–5 ಹಾಗೂ ಡಿ.ಡಬ್ಲ್ಯೂ–1 ರವರ ಹೇಳಿಕೆ ನಿ.ಡಿ–1 ರಿಂದ ನಿ.ಡಿ–5 ಹಾಗೂ ಕಡತದಲ್ಲಿರುವ ದಾಖಲಾತಿಗಳನ್ನು ಕೂಲಂಕುಶವಾಗಿ ಪರಿಶೀಲನೆ ಮಾಡಿಲಾಗಿ, ಗುಲಬರ್ಗಾ ಜಿಲ್ಲೆಯ ಅಫ್ಜಲ್‌ಪುರ ಹಾಗೂ ಜೇವರ್ಗಿ ತಾಲ್ಲೂಕುಗಳಲ್ಲಿ ಹರಿದು ಹೋಗುವ ಭೀಮಾ ನದಿಯ ತೀರದಲ್ಲಿ ಅಕ್ರಮ ಮರಳು ಸಾಗಾಣಿಕೆ ನಡೆಯುತ್ತಿದೆ ಎಂಬ ಪತ್ರಿಕಾ ಪ್ರಕಟಣೆಯನ್ನಾಧರಿಸಿ, ಅನಾಮಧೇಯರೊಬ್ಬರು ದೂರನ್ನು ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಅದರ ಪ್ರತಿಯನ್ನು ಲೋಕಾಯುಕ್ತ ಸಂಸ್ಥೆಗೆ ಸಲ್ಲಿಸಿದ್ದು, ಸದರಿ ದೂರನ್ನು ಸ್ವಯಂ ಪ್ರೇರಿತ ದೂರನ್ನು ದಾಖಲಿಸಿಕೊಂಡು ತನಿಖೆಗೊಳಪಡಿಸಿ ತನಿಖಾಧಿಕಾರಿ ಶ್ರೀ ಜೇಮ್ಸ್ ಮಿನೇಜಸ್, ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಕಲಬುರ್ಗಿ ರವರು ತನಿಖೆ ಕೈಗೊಂಡಿದ್ದು, ದಿನಾಂಕ 19–06–2013ರಂದು ಜೇವರ್ಗಿ ತಾಲ್ಲೂಕಿನ ಕೋಲ್ಲೂರು ಗ್ರಾಮಕ್ಕೆ ಭೇಟಿ ನೀಡಿದಾಗ ಅಲ್ಲಿ ಸರ್ಕಾರಿ ಶಾಲೆ ಆವರಣದಲ್ಲಿ 3 ಟಿಪ್ಪರುಗಳು ಕೆ.ಎ–32 ಬಿ–6124, ಕೆಎ–32ಬಿ 8135, ಕೆ.ಎ–32ಬಿ 7172 ನಿಂತಿದ್ದು ಶಾಲೆಯ ಪಕ್ಕದ ಕುಲ್ಲಾ ಜಾಗದಲ್ಲಿ ಮರಳು ಸಂಗ್ರಹಣೆ ಮಾಡಿದ್ದು, ತಹಶೀಲ್ದಾರರು ಮತ್ತು ಎಇಇ, ಪಿಡಬ್ಲ್ಯೂಡಿ, ಪಿಎಸ್.ಐ ಜೇವರ್ಗಿ ರವರಿಗೆ ಫೋನ್ ಮುಖಾಂತರ ಬರಮಾಡಿಕೊಂಡು ಶಾಲೆ ಅವರಣದಲ್ಲಿ ನಿಲ್ಲಿಸಿದ 4 ಟಿಪ್ಪರುಗಳನ್ನು, 1 ಜೆ.ಸಿ.ಬಿ ಹಾಗೂ ಮರಳು ತುಂಬುತ್ತಿದ್ದ ಚಾಲಕ ಮತ್ತು ಕ್ಲಿನರ್‌ನ್ನು ತಹಶೀಲ್ದಾರ್ ವಶಕ್ಕೆ ಕೊಟ್ಟು, ಸದರಿ ಅಕ್ರಮ ಮರಳು ಸಂಗ್ರಹಣೆ ಮಾಡಿದ ಬಗ್ಗೆ

ಜಾಗ ತೋರಿಸಿ, ಸೂಕ್ತ ಕಾನೂನು ಕ್ರಮ ಜರುಗಿಸಿ ವರದಿ ಸಲ್ಲಿಸಲು ಕೋರಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಮುಂದುವರೆದು, ತಹಶೀಲ್ದಾರರು ದಿನಾಂಕ: 19-06-2013ರಲ್ಲಿ ಕೋಲ್ಲೂರು ಸರ್ಕಾರಿ ಪ್ರೌಢ ಶಾಲೆ ಆವರಣ ಮತ್ತು ಶ್ರೀ ಬೀರಲಿಂಗೇಶ್ವರ ದೇವಾಲಯದ ಬಳಿ ಸುಮಾರು 115 ಟಿಪ್ಪರ್‌ಗಳಷ್ಟು ಮರಳು ಸಾಗಾಣಿಕೆ ಅಂತ ಪ್ರಸ್ತಾಪಿಸಿದ್ದು ಅದನ್ನು ಎಇಇ, ಪಿಡಬ್ಲ್ಯೂಡಿ ರವರ ಅಧೀನ ನೀಡಿದ್ದು, ದಾಖಲಾತಿಗಳನ್ನು ಪರಿಶೀಲಿಸಲಾಗಿ ನಿ.ಪಿ-4 ರಂತೆ ಕೇವಲ ಜಪ್ತಿ ಮಾಡಲಾದ 4 ಟಿಪ್ಪರ್‌ಗಳಿಗೆ ಮತ್ತು 1 ಜೆ.ಸಿ.ಬಿಗೆ ದಂಡ ವಿಧಿಸಿರುವುದು ಕಂಡು ಬಂದಿರುತ್ತದೆ. ಕರ್ನಾಟಕ ಭೂ ಕಂದಾಯ ಕಾಯ್ದೆ 73 ರಂತೆ ತಹಶೀಲ್ದಾರ್ ರವರು ದಂಢ ವಿದಿಸುವ ಸಂಪೂರ್ಣ ಅಧಿಕಾರವಿರುತ್ತದೆ. ಕರ್ನಾಟಕ ಭೂ ಕಂದಾಯ ಕಾಯ್ದೆ 73 **"Sec – 73. Recovery of value of natural product unauthorisedly removed from certain lands: (1) Any person who shall unauthorisedly remove from any land** which is set a part for a special purpose or from any land which is the property of Government, **any natural product shall be liable to the State Government for the value thereof** which shall be recoverable from him as an arrear of land revenue, in addition to any penalty to which he may be liable under this Act for such unauthorized removal; **and not withstanding any criminal proceedings which may be instituted against him in respect of such unauthorized removal**.

27. ಆಪಾದಿತ ಸರ್ಕಾರಿ ನೌಕರ ರವರು ಉಳಿದ 115 ಟಿಪ್ಪರ್‌ಗಳು ಅಕ್ರಮ ಮರಳು ಸಾಗಾಣಿಕೆ/ಗಣಿಗಾರಿಕೆ ಜಪ್ತಿ ಮಾಡಿದ ವಾಹನಗಳನ್ನು ಆಪಾದಿತ ಸರ್ಕಾರಿ ನೌಕರರು ತಾಲ್ಲೂಕು ದಂಡಾಧಿಕಾರಿಯಾಗಿ ಯಾವುದೇ ದಂಡ ವಿಧಿಸದೆ ಪಿ.ಎಸ್.ಐ. ಜೇವರ್ಗಿ ರವರಿಗೆ ಕೇವಲ ಹಸ್ತಾಂತರಿಸಿ, ಕರ್ತವ್ಯಲೋಪವೆಸಗಿರುತ್ತಾರೆ ಹಾಗೂ ಸರ್ಕಾರದ ಬೊಕ್ಕಸಕ್ಕೆ ನಷ್ಟವುಂಟು ಮಾಡಿರುತ್ತಾರೆ ಎಂಬುದನ್ನು ಶಿಸ್ತುಪ್ರಾಧಿಕಾರಿಗಳು ವಿಚಾರಣೆಯಿಂದ ಸಾಬೀತುಪಡಿಸುವಲ್ಲಿ **ಸಫಲರಾಗಿರುತ್ತಾರೆ.**

ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ವಿಚಾರಣಾ ವರದಿ ಸಲ್ಲಿಸಲಾಗಿದೆ.

**: ವಿಚಾರಣಾ ವರದಿ :**

ಶಿಸ್ತು ಪ್ರಾಧಿಕಾರವು ಆಪಾದಿತ ಸರ್ಕಾರಿ ನೌಕರ **ಶ್ರೀ ಎಂ. ಎನ್. ಗೋತೆ,** ಹಿಂದಿನ ತಹಶೀಲ್ದಾರ್, ಜೇವರ್ಗಿ ತಾಲ್ಲೂಕು, ಹಾಲಿ ನಿವೃತ್ತ ರವರ ವಿರುದ್ಧದ ದೋಷಾರೋಪಣೆಯಲ್ಲಿ ಮಾಡಲಾದ ಆಪಾದನೆ ಗಳನ್ನು **ರುಜುವಾತು ಪಡಿಸುವಲ್ಲಿ ಸಫಲರಾಗಿರುತ್ತಾರೆ.**

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ–1 ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

**6ನೇ ಜನವರಿ 2022.**

**(ಜಿ. ನಂಜುಂಡಯ್ಯ)**
ಅಪರ ನಿಬಂಧಕರು ವಿಚಾರಣೆಗಳು–10,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

| | |
|---|---|
| **LIST OF WITNESS EXAMINED ON BEHALF OF DISCIPLINARY AUTHORITY :** | |
| PW-1 : Sri. James Minages, Dy. Supdt. Op Police, Karnataka Lokayukta, Gulbarga. (I.O) (original) | |
| **LIST OF WITNESS EXAMINED ON BEHALF OF DEFENSE :** | |
| DW-1 : Sri. M.N. Gothe, (DGO)-(original) | |
| **LIST OF EXHIBITS MARKED ON BEHALF OF DISCIPLINARY AUTHORITY:** | |
| Ex.P.1: | Investigation Report of I.O dated 29/06/2013 (Xerox) |
| Ex.P.2 : | Covering letter of Superintendent of Police, Lokayukta, Gulbarga addressed to Hon'ble Upalokayukta along with mahazar copy (Xerox) |
| Ex.P.3 : | Letter of Tahasildar regarding seizure of lorry tiffers (Certified Copy ) |
| Ex.P.4 : | Letter of Assistant Executive Engineer, PWD Sub Division, Jewargi dated 21/06/2013 addressed to PSI, Jewargi Police Station (Xerox) |
| Ex.P.5 : | Paper cutting of illegal sand transportation and proceedings of the Sand Monitoring Committee meeting held on 21.02.2013 and its enclosures (Xerox 108, Certified Copies 109 to 119) |
| **LIST OF EXHIBITS MARKED ON BEHALF OF DEFENSE:** | |
| Ex.D-1 : | Official Memorandum dated 22/06/2013 of Tahasildar, Jewargi regarding fine amount of illegal sand transportation. (Certified Copy) |

| | |
|---|---|
| Ex.D-2: | Letter of Tahasildar, Jewargi dated 08/07/2013 regarding fine amount of illegal sand transportation remitted to Executive Engineer, PWD, Gulbarga (Certified Copy) |
| Ex.D-3 | Proceedings of the Sand Monitoring Committee meeting held on 21/02/2013. (Certified Copies) |
| Ex.D-4 | Assistant Executive Engineer, PWD, Sub-Division, Jewargi dated 10/07/2013 addressed to Tahasildar permission sought to sell the sand. (Certified Copy) |
| Ex.D-5 | Proceedings of the Deputy Commissioner Gulbarga dated 19/07/2013 regarding perusal of the documents and to submit report within a week . (Certified Copy) |

DOR of DGO No. : **Already Retired (30.06.2015)**

Dated 06/01/2022

Additional Registrar (Enquiries)-10
Karnataka Lokayukta,
Bengaluru.

**GOVERNMENT OF KARNATAKA**

**KARNATAKA LOKAYUKTA**

No.UPLOK-1/DE/19/2018/ARE-10

Multi Storied Building,
Dr. B.R. Ambedkar Veedhi,
Bengaluru-560 001
Date: **10/01/2022**

**RECOMMENDATION**

Sub:- Departmental inquiry against;
Sri M.N. Gothe, the then Tahsildar, Jewargi Taluk, Kalaburagi District (Presently retired) – Reg.

Ref:- 1) Govt. Order No. RD 132 ADE 2016, Bengaluru dated 4/12/2017.

2) Nomination order No.UPLOK-12/DE/19/2018, Bengaluru dated 11/1/2018 of Upalokayukta-1, State of Karnataka, Bengaluru

3) Inquiry Report dated 6/1/2018 of Additional Registrar of Enquiries-10, Karnataka Lokayukta, Bengaluru

----

The Government by its order dated 4/12/2017 initiated the disciplinary proceedings against Sri M.N. Gothe, the then Tahsildar, Jewargi Taluk, Kalaburagi District (Presently Retired) (hereinafter referred to as Delinquent Government Official, for short as DGO) and entrusted the Departmental Inquiry to this Institution.

2. This Institution by Nomination Order No.UPLOK-1/DE/19/2018 Bengaluru dated 11/1/2018 nominated Additional Registrar of Enquiries-10 Karnataka Lokayukta, Bengaluru, as the Inquiry Officer to frame charges and to conduct Departmental Inquiry against DGO for the alleged charge of misconduct, said to have been committed by him.

3. The DGO Sri M.N. Gothe, the then Tahsildar, Jewargi Taluk, Kalaburagi District (Presently Retired) was tried for the following charge:-

"ಆಪಾದಿತ ಸರ್ಕಾರಿ ನೌಕರರಾದ **ಶ್ರೀ ಎಂ. ಎನ್. ಗೋತೆ,** ಹಿಂದಿನ ತಹಶೀಲ್ದಾರ್, ಜೇವರ್ಗಿ ತಾಲ್ಲೂಕು (ಹಾಲಿ ನಿವೃತ್ತ) ಆದ ನೀವು ಜೇವರ್ಗಿ ತಾಲ್ಲೂಕಿನಲ್ಲಿ ಹರಿದು ಹೋಗಿರುವ ಭೀಮಾನದಿ ತೀರದಲ್ಲಿ ಅಕ್ರಮ ಮರಳು ಸಂಗ್ರಹಿಸಿ ಕಳ್ಳತನದಿಂದ ಸಾಗಣಿಕೆ ಮಾಡುತ್ತಿರುವುದು ಕಂಡು ಬಂದ ಮೇರೆಗೆ ತನಿಖಾಧಿಕಾರಿಯವರು ನಿಮ್ಮನ್ನು ಕರೆಯಿಸಿ, ಸರ್ಕಾರಿ ಪ್ರಾಢಶಾಲೆಯ ಆವರಣದಲ್ಲಿ ಟಿಪ್ಪರ್ ಗಳನ್ನು ನಿಲ್ಲಿಸಿ ಪಕ್ಕದ ಖುಲ್ಲಾ ಜಾಗದಲ್ಲಿ ಅಕ್ರಮ ಮರಳು ಸಂಗ್ರಹಿಸಿ, ಟಿಪ್ಪರ್‌ಗೆ ಜೆಸಿಬಿಯಿಂದ ಮರಳು ತುಂಬುತ್ತಿರುವುದು ಕಂಡು ಬಂದಿದ್ದರಿಂದ ಅವರ ವಿರುದ್ಧ ಸೂಕ್ತ ಕ್ರಮ ಕೈಗೊಂಡು ವರದಿ ಸಲ್ಲಿಸುವಂತೆ ಸೂಚಿಸಿದ್ದರೂ ಸಹ ಕೆಎ-32 ಬಿ 7174 ರ ವಾಹನಕ್ಕೆ ಮಾತ್ರ ರೂ.25,000/- ದಂಡ ವಿಧಿಸಿ ಉಳಿದ ವಾಹನಗಳಿಗೆ ದಂಡ ವಿಧಿಸದೆ ಬಿಡುಗಡೆಗೊಳಿಸಿರುತ್ತೀರಿ ಹಾಗೂ ಅಕ್ರಮವಾಗಿ ಸಂಗ್ರಹ ಮಾಡಿದ್ದ 115 ಟಿಪ್ಪರ್‌ಗಳಷ್ಟು ಮರಳು ಸಂಗ್ರಹಣೆ ಮಾಡಿದ್ದರೂ ಸಹ ಯಾವುದೇ ಪರಿಣಾಮಕಾರಿ ಕ್ರಮ ಕೈಗೊಂಡಿರುವುದಿಲ್ಲ.

ಆದಕಾರಣ ಆಪಾದಿತ ಸರ್ಕಾರಿ ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯಪಾಲನೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಸ್ವಂತ ಲಾಭಕ್ಕಾಗಿ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಆಪಾದಿತ ಸರ್ಕಾರಿ ನೌಕರರಾದ ನೀವು ಕರ್ನಾಟಕ ಸರ್ಕಾರಿ ಸೇವಾ (ನಡತೆ) ನಿಯಮಾವಳಿ 1966ರ ನಿಯಮ (3)(1)ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದೀರಿ

4. The Inquiry Officer (Additional Registrar of Enquiries-10) on proper appreciation of oral and documentary evidence has held that the Disciplinary Authority has proved the above charge against DGO Sri M.N. Gothe, the then Tahsildar, Jewargi Taluk, Kalaburagi District (Presently Retired).

5. On re-consideration of inquiry report and taking note of the totality of the circumstances of the case, I do not find any reason to interfere with the findings recorded by the Inquiry Officer. It is hereby recommended to the Government to accept the report of Inquiry Officer.

6. As per the First Oral Statement submitted by DGO, he has retired from service on 31/5/2015.

7. Having regard to the nature of charge proved against DGO Sri M.N. Gothe, the then Tahsildar, Jewargi Taluk, Kalaburagi District (Presently Retired), it is hereby recommended to the Government for imposing penalty of permanently withholding 10% of pension payable on DGO Sri M.N. Gothe.

8. Action taken in the matter shall be intimated to this Authority.

Connected records are enclosed herewith.

Sd/- 10/1/22

**(JUSTICE B.S.PATIL)**
Upalokayukta,
State of Karnataka,
Bengaluru